ಯುವತಿಯೊಬ್ಬಳು ಯಾರಿಗೋ ಮನಸೋತು ಕಾಲು ಜಾರಿದಳು. ಕುಟುಂಬದ ಮರ್ಯಾದೆ ಕಾಪಾಡಲು ಅವಳ ಅಣ್ಣ ಅವಳನ್ನು ಕೆರೆಯಲ್ಲಿ ಮುಳುಗಿಸಿ ಸಾಯಿಸಿದ. ಸತ್ತ ಯುವತಿಯ ಆತ್ಮ ಕೊಂದ ಅಣ್ಣನ ಮಗಳ ಮೈಮೇಲೆ ಆವಾಹನೆಯಾಯ್ತು. "ಬೇಡ ದಮ್ಮಯ್ಯ ಅಂದ್ರೂ ಕೇಳ್ಲಿಲ್ಲ ನೀನು. ಗಳದಲ್ಲಿ ದೂಕಿ ದೂಕಿ ಮುಳುಗಿಸಿ ಕೊಂದೆ. ಬಿಡ್ತೀನಾ ನಾನು? ವಂಶಾನೇ ನಿರ್ವಂಶ ಮಾಡ್ತೀನಿ" ಎಂದು ಕೇಕೆ ಹಾಕಿತು. ಬಹುಶಃ ಆ ಅಣ್ಣನ ಮಗಳು ತನ್ನ ತಂದೆ ಮಾಡಿದ ಘನಕಾರ್ಯವನ್ನು ಕದ್ದುಮುಚ್ಚಿ ನೋಡಿರಬಹುದು ಎಂದು ವೈಜ್ಞಾನಿಕ ಮನೋಧರ್ಮದವರು ಅರ್ಥೈಸಿಕೊಳ್ಳಬಹುದು. 'ಮರ್ಯಾದಾ ಹತ್ಯೆ' ಅನ್ನುವುದು ಆಗಲೂ ಇತ್ತು, ಈಗಲೂ ಇದೆ, ಮತ್ತು ಆಗ ಈಗಿನಂತೆ ಬೆಳಕಿಗೆ ಬರದೆ ಸದ್ದಿಲ್ಲದೆ ಮುಚ್ಚಿ ಹೋಗುತ್ತಿತ್ತು ಎಂದರೆ ತಪ್ಪಾಗಲಿಕ್ಕಿಲ್ಲ. ಯಾವ ಕತೆಯೂ ಈ ಜಗತ್ತಿನಲ್ಲಿ ಹೊಸದಲ್ಲ. ಯಾವತ್ತೂ ನಡೆಯದಿರುವಂತದ್ದಲ್ಲ.

ಸಮಾಜದಿಂದ ಅವಗಣನೆಗೆ, ಬಹಿಷ್ಕಾರಕ್ಕೆ ಗುರಿಯಾಗಿ ತುತ್ತು ಅನ್ನಕ್ಕೆಂದು ಮನೆಮನೆ ಮೆಟ್ಟಿಲು ಹತ್ತಿಳಿಯಬೇಕಾದ ಸಂದರ್ಭದಲ್ಲೂ ಪುಣ್ಯಮ್ಮ ಮಗನ ಮೇಲಿಟ್ಟುಕೊಂಡಿದ್ದ ಮೋಹಕ್ಕೆ ಕಿಂಚಿತ್ ಊನ ಬಂದಿರಲಿಲ್ಲ. ತಾಯಿ, ಮಗ ಉಣ್ಣಲು ಕೂತರು ಅಂದರೆ ಮಗ ಎಷ್ಟು ಉಂಡರೂ ತೃಪ್ತಿ ಇಲ್ಲ ಪುಣ್ಯಮ್ಮನಿಗೆ. ಕುಂಟೇಕೋಣದ ಹಾಗೆ ಬೆಳೆದಿದ್ದರೂ ಮಗನ ಕೈ ಸುಡಬಾರದೆಂದು ಅವನಿಗೆ ಅನ್ನ ಕಲೆಸಿಕೊಡುತ್ತಿದ್ದವಳು ಅವಳೇ. "ಚೂರು ತುಪ್ಪ ಹಾಕ್ರೀ. ಹುಳಿ ಖಾರ" ಎನ್ನುತ್ತಾ ಮರ್ಯಾದೆ ಬಿಟ್ಟು ಕೇಳಿ ತುಪ್ಪ ಹಾಕಿಸಿಕೊಳ್ಳುತ್ತಿದ್ದಳು. ತನ್ನ ಬಾಳೆಲೆಗೆ ಬಿದ್ದಿದ್ದನ್ನು ಯಾರೂ ಕಾಣದ ಹಾಗೆ ಮಗನ ಎಲೆಗೆ ರವಾನಿಸುತ್ತಿದ್ದಳು. ವಿಶೇಷಕಟ್ಲೆಯಲ್ಲಿ ಮಾಡಿದ ಭಕ್ಷ್ಯಗಳನ್ನು ಬದಿಗಿಟ್ಟುಕೊಂಡ ಬೇರೊಂದು ಎಲೆಗೆ ಹಾಕಿಸಿಕೊಂಡು ಅನ್ನ, ಮೇಲೋಗರಗಳಿಗೆ ತಕ್ಕ ನ್ಯಾಯ ಒದಗಿಸಿ ಆಮೇಲೆ ಅವನ್ನೆಲ್ಲಾ ವಿರಾಮವಾಗಿ ಮೇಯಲು ಮಗನಿಗೆ ತಯಾರಿ ಕೊಟ್ಟಿದ್ದಳು. ತುತ್ತು ಲೆಕ್ಕ ಮಾಡುತ್ತಿದ್ದ ಮನೆಮಕ್ಕಳಿಗೆ, "ಅವನನ್ನು ನೋಡಿ ಕಲೀರಿ" ಎಂದು ತಾಯಂದಿರು ಎದುರೆದುರೇ ಕುಹಕದ ಮಾತಾಡಿದರೂ ಕೆಪ್ಪಿಯಂತಿರುತ್ತಿದ್ದಳು ಪುಣ್ಯಮ್ಮ. ಮಗ ಚಡ್ಡಿ ಸಡಿಲ ಮಾಡಿಕೊಳ್ಳುತ್ತಾ ಏದುಸಿರು ಬರುವಷ್ಟು ಉಂಡರೆ ಅವಳಿಗೆ ತೃಪ್ತಿ. 'ಅಮ್ಮ ಕಲಿಸಿದ ಹೊಟ್ಟೆ' ಎನ್ನುವ ಗಾದೆಯೇ ಉಂಟಲ್ಲ? "ನೋಡ್ತಿರು, ಊಟ ಆಗ್ತಿದ್ದಾಗೆ ತಂಬಿಗೆ ತಗಂಡು ಹಾಡ್ಯಕ್ಕೆ ಓಡ್ತಾನೆ" ಎಂದು ಮಕ್ಕಳು ಚಾಷ್ಟೆ ಮಾತಾಡಿಕೊಳ್ಳುವುದು ಸತ್ಯ ಎಂಬಂತೆ ಊಟ ಮುಗಿಸಿ ನೀರು ಕೈಗೆ ಬೀಳುತ್ತಿದ್ದಂತೆ ಅವನಿಗೆ ಅವಸರವಾಗಿಬಿಡುತ್ತಿತ್ತು. ಅವನ ಕೈಗೆ ತಂಬಿಗೆ ತುಂಬಿಸಿಕೊಟ್ಟು ಪುಣ್ಯಮ್ಮ ಎಚ್ಚರಿಕೆ ಹೇಳುತ್ತಿದ್ದಳು,

"ಕಾಲಡಿ ನೋಡ್ಕಂಡು ಹೋಗು. ಹಾವು ಹರಣೆ ತುಳಿದು ಬಿಡ್ಬೇಡ, ಹುಷಾರು..."

★★★

ಇಂತಾ ಪುಣ್ಯಮ್ಮನನ್ನು ಅವಳು ಬಂದಾಗಲೆಲ್ಲಾ ಮನೆಮಂದಿ ಸ್ವಾಗತಿಸುತ್ತಿದ್ದುದಕ್ಕೆ ಒಂದು ಸಕಾರಣ ಇತ್ತು. ಅಡಿಕೆಕೊಯ್ಲಿನ ಕಾಲವಾದರೆ ಒಂದೆರಡು ತಿಂಗಳು ಠಿಕಾಣಿ ಹಾಕಿ ಅಡಿಕೆ ಸುಲಿತ ಮಾಡಲು ಪುಣ್ಯಮ್ಮನನ್ನು ಒಪ್ಪಿಸಿಬಿಟ್ಟರೆ ಅರ್ಧ ತಲೆನೋವು ಕಳೆದ ಲೆಕ್ಕ. ಒಂದು ಕಡೆ ನಿಲ್ಲದೆ ಕಾಲಿಗೆ ಚಕ್ರ ಕಟ್ಟಿಕೊಂಡಿರುತ್ತಿದ್ದ ಪುಣ್ಯಮ್ಮ ಕೆಲಸಕ್ಕೆ ನಿಂತಳು ಅಂದರೆ ಬೆಟ್ಟು ತೋರಿಸುವ ಹಾಗಿಲ್ಲ. ಕೆಲಸಗಳ್ಳತನ ಮಾಡುವ ಪಂಚಾತಿಕೆ ಇಲ್ಲ. ಮಗನನ್ನು ಕಣ್ಣೆದುರಿಗಿಟ್ಟುಕೊಂಡು ಕತ್ತೆಕೆಲಸ ಮಾಡಬಲ್ಲಳು ಪುಣ್ಯಮ್ಮ. ಅವಳ ಬರುವಿಕೆಗೆ ಕಾದು